**ಪ್ರಧಾನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು**

**ಸಿಸಿ 2197/2019 ಡಿಡಬ್ಲ್ಯೂ-1**

ಸಾಕ್ಷಿದಾರರ ಹೆಸರು - ಎಬಿ ರಾಜೇಶ್
ತಂದೆಯ ಹೆಸರು - ಬೊಮ್ಮಯ್ಯ
ವಯಸ್ಸು - 50 ವರ್ಷ
ಉದ್ಯೋಗ - ಡ್ರೈವರ್
ವಾಸಸ್ಥಳ - ಕದಲೂರು

ದಿನಾಂಕಃ-22-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃಃ ಆರೋಪಿ ಪರ ಶ್ರೀ. ವೈಕೆ ವಕೀಲರಿಂದಃ-**

ನನಗೂ ಮತ್ತು ದೂರುದಾರರಾದ ರಾಮಕೃಷ್ಣ ರವರಿಗೂ ಯಾವುದೇ ವ್ಯವಹಾರ ಇರುವುದಿಲ್ಲ. 2015 ರಲ್ಲಿ ನಾನು ಕದಲೂರು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸೋತಿರುತ್ತೇನೆ. ನಂತರ ಬೆಂಗಳೂರಿಗೆ ಹೋಗಿ ಸೇರಿರುತ್ತೇನೆ. ಆಗಾಗ ಊರಿಗೆ ಬಂದು ಹೋಗುತ್ತಿದ್ದೆ. ಸದರಿ ವೇಳೆಯಲ್ಲಿ ನನಗೆ ಯಾವುದೇ ನೋಟೀಸ್ ಜಾರಿಯಾಗಿಲ್ಲ ಮತ್ತು ದೂರುದಾರರು ಹಣ ಕೊಡಬೇಕೆಂದು ನನ್ನನ್ನು ಕೇಳಿರುವುದಿಲ್ಲ. 2020 ರಲ್ಲಿ ಮದ್ದೂರಿನಲ್ಲಿ ದೂರುದಾರರು ನನ್ನನ್ನು ಭೇಟಿ ಮಾಡಿ, ತನ್ನ ಮಗನಿಗೆ ಕಾರು ಕೊಡಿಸಬೇಕೆಂದು ನನ್ನಿಂದ 3 ಲಕ್ಷ ಸಾಲ ಪಡೆದಿದ್ದಾರೆ. 2025 ರಲ್ಲಿ ನಾನು ಊರಿಗೆ ಬಂದು ಜಮೀನನ್ನು ಮಾರಾಟ ಮಾಡಿ ವಾಹನ ಖರೀದಿಸಲು ನಿರ್ಧರಿಸಿದ್ದು ಸದರಿ ಸಮಯದಲ್ಲಿ ಪೊಲೀಸರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದು ನಾನು ಜಾಮೀನು ಪಡೆದಿರುತ್ತೇನೆ. ಸದರಿ ದೂರುದಾರರು ನನ್ನಿಂದ ಸಾಲ ಪಡೆದ 3 ಲಕ್ಷಕ್ಕೆ ಆನ್ ಡಿಮ್ಯಾಂಡ್ ಪ್ರನೋಟ್ ಬರೆದುಕೊಟ್ಟಿರುತ್ತಾರೆ. ನಾನು ವಿವಾದಿತ ಚೆಕ್ ನ್ನು ಊರಿನಲ್ಲಿ ಹಬ್ಬ ಮಾಡಲು ವಂತಿಗೆಯನ್ನು ಸ್ವೀಕರಿಸುವಾಗ ಸದರಿ ಚೆಕ್ ನ್ನು ನೀಡಿದ್ದು, ಅದನ್ನು ಊರಿನ ಪರವಾಗಿ ದೂರುದಾರರೇ ಪಡೆದುಕೊಳ್ಳುತ್ತಿದ್ದರು, ಅದನ್ನು ದುರುಪಯೋಗಪಡಿಸಿಕೊಂಡು ಪ್ರಸುತ್ತ ಪ್ರಕರಣ ದಾಖಲಿಸಿರುತ್ತಾರೆ.

Prays time for further chief granted.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ